ಎರಡು ದ್ವಾರಗಳಿದ್ದು, ಒಂದು ಪೂರ್ವಕ್ಕೆ ಮತ್ತು ಇನ್ನೊಂದು ದಕ್ಷಿಣಕ್ಕೆ ತೆರೆದುಕೊಂಡಿವೆ. ಒಳಗಿರುವ ಶಿವಲಿಂಗ ಸುಮಾರು ಐದು ಅಡಿ ಎತ್ತರವಿದೆ. ಮುಖಮಂಟಪದೆದುರಿನ ಬಾಗಿಲಿನಿಂದಾಚೆಗೆ ಮತ್ತೊಂದು ಮಂಟಪದಡಿಯಲ್ಲಿ ಬೃಹತ್ ಗಾತ್ರದ ನಂದಿಯ ವಿಗ್ರಹವಿದೆ. ಎರಡೂ ದ್ವಾರಗಳ ಪರಿಧಿಯಲ್ಲಿ ಚಾಲುಕ್ಯ ವಾಸ್ತುಶಿಲ್ಪ ರೀತಿಯಲ್ಲಿ ಏಳು ತೋಳುಗಳ ಸುಂದರ ವಿನ್ಯಾಸಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ನವರಂಗದೊಳಗಿನ ಕಂಬಗಳೂ ಕೆತ್ತನೆಗಳಿವೆ.

ಕರ್ನಾಟಕದ ಐತಿಹಾಸಿಕ ಶಿವ ದೇವಾಲಯಗಳಲ್ಲಿ ಮುದ್ದಾದ ಮತ್ತು ಸೂಕ್ಷ್ಮ ಕೆತ್ತನೆಗಳಿಂದ ಅಲಂಕೃತವಾದ ನಂದಿಯ ವಿಗ್ರಹಗಳನ್ನು ಕಾಣುವುದು ತುಂಬ ಸಾಮಾನ್ಯ. ಮನಸೂರೆಗೊಳ್ಳುವ ಬೃಹದ್‌ಗಾತ್ರದ ನಂದಿಗಳನ್ನೂ ಸಹ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ, ತುರುವೇಕೆರೆಯ ಗಂಗಾಧರೇಶ್ವರ ದೇವಾಲಯದಲ್ಲಿ, ಮೈಸೂರಿನ ಚಾಮುಂಡಿ ಬೆಟ್ಟ ಮತ್ತಿತರ ಸ್ಥಳಗಳಲ್ಲಿ ಕಾಣಬಹುದು. ಈ ಸಾಲಿಗೆ ಸೇರುವ, ಅಷ್ಟೇ ಸೌಂದರ್ಯವುಳ್ಳ ನಂದಿ ಡಂಬಳದ ದೊಡ್ಡಬಸಪ್ಪ ದೇಗುಲದಲ್ಲಿದೆ.

ಈ ದೇವಾಲಯದ ಶಿಖರ ಆಕರ್ಷಕ. ಅದರ ವಿನ್ಯಾಸದಲ್ಲಿ ಶಿಲ್ಪಿಗಳು ತೋರಿರುವ ಪ್ರಾವೀಣ್ಯತೆಯನ್ನು ನೋಡಿಯೇ ಸವಿಯಬೇಕು. ಸಾಮಾನ್ಯವಾಗಿ ಎಂಟು, ಹನ್ನೆರಡು ಅಥವಾ ಹದಿನಾರು ಮೂಲೆಗಳನ್ನು ಒಳಗೊಂಡ ನಿರಂತರವಲ್ಲದ ಶಿಖರಗಳನ್ನು ಚಾಲುಕ್ಯ ಮತ್ತು ಹೊಯ್ಸಳ ದೇಗುಲಗಳಲ್ಲಿ ನಾವು ಕಾಣಬಹುದು. ಆದರೆ ದೊಡ್ಡಬಸಪ್ಪ ದೇವಾಲಯ 24 ಮೂಲೆಗಳುಳ್ಳ ಶಿಖರವನ್ನು ಹೊಂದಿರುವ ಅಪರೂಪದ ಕೆತ್ತನೆ. ಹೆಚ್ಚು ಮೂಲೆಗಳಿಂದಾಗಿ ಈ ದೇಗುಲದ ಶಿಖರ ಬಹುಮಟ್ಟಿಗೆ ವೃತ್ತಾಕಾರದ ತಳವನ್ನು ಹೊಂದಿರುವ ಶಂಕುವಿನಂತೆ ತೋರುತ್ತದೆ. ಕನ್ನಡಿಗಳನ್ನು ನಿರ್ದಿಷ್ಟ ಕೋನಗಳಿಗೆ ಜೋಡಿಸಿ ಚಿತ್ರವಿಚಿತ್ರವಾದ ನಮೂನೆಗಳನ್ನು ಸೃಷ್ಟಿಸುವ 'ಕಲೈಡೋಸ್ಕೋಪ್' ರೀತಿಯಲ್ಲಿ ಈ ದೇಗುಲದ ಶಿಖರದ ಅನುರೂಪತೆ ಹುಬ್ಬೇರಿಸುವಂತೆ ಮಾಡುತ್ತದೆ.

ಸುಂದರ ಕೆತ್ತನೆಗಳು: ದೇವಾಲಯದ ಹೊರಗಣ ಭಿತ್ತಿ ಮತ್ತು ಶಿಖರಗಳಲ್ಲಿನ ಸೂಕ್ಷ್ಮ ಮತ್ತು ಸುಂದರ ಕೆತ್ತನೆಗಳು, ಮತ್ತು ಅವುಗಳಲ್ಲಿ ಅಡಕವಾಗಿರುವ ಜ್ಯಾಮಿತೀಯ ಅನುರೂಪತೆ ಮತ್ತು ಪರಿಪೂರ್ಣತೆಗಳು ಕಣ್ಮನ ಸೆಳೆಯುತ್ತವೆ.. ಪಶ್ಚಿಮ ಚಾಲುಕ್ಯ ವಾಸ್ತುಶಿಲ್ಪ ಪದ್ಧತಿಯಲ್ಲಿ ಕಟ್ಟಿದ ದೇಗುಲಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವೈಶಿಷ್ಟ್ಯವೆಂದರೆ ಆಲಯದ ಹೊರಭಿತ್ತಿಗಳ ಮೇಲೆ ಸಾಲಾಗಿ ಕಾಣಸಿಗುವ ಸೂಕ್ಷ್ಮವಾದ ಕೀರ್ತಿಮುಖಗಳ ಮತ್ತು ಚಿಕಣಿ ಶಿಖರಗಳ ಕೆತ್ತನೆಗಳು. ಸಾಮಾನ್ಯವಾಗಿ ಇವು ಇತರ ಕೆತ್ತನೆಗಳಿಲ್ಲದ ಹೊರಗೋಡೆಗಳನ್ನು ಸೊಗಸಾಗಿ ಆವರಿಸಿ ಖಾಲಿ ಜಾಗಗಳು ಮತ್ತು ಕೆತ್ತನೆಗಳ ನಡುವೆ ಸಮತೋಲನವನ್ನು ಕಾಯ್ದುಕೊಂಡು ಇಡೀ ದೇವಾಲಯದ ಹೊರಗಿನ ಅಂದವನ್ನು ಹೆಚ್ಚಿಸುತ್ತವೆ.

ಡಂಬಳದ ದೊಡ್ಡಬಸಪ್ಪ ದೇವಸ್ಥಾನದಲ್ಲಿ ಶಿಲ್ಪಿಗಳು ಕೀರ್ತಿಮುಖ ಮತ್ತು ಚಿಕಣಿ ಶಿಖರಗಳ ಆಸುಪಾಸಿನ ಸಣ್ಣ ಕೆತ್ತನೆಗಳಲ್ಲಿ ಸಂಗೀತ ಮತ್ತು ನೃತ್ಯನಿರತರಾದ ಯಕ್ಷ ಯಕ್ಷಿಯರು, ಆನೆಗಳನ್ನೇರಿ ಯುದ್ಧನಿರತರಾದ ಸೇನೆಯ ವೀರರು ಮತ್ತು ಮದಗಜಗಳನ್ನು ಪಳಗಿಸಿ ಜಯಭೇರಿ ಬಾರಿಸುತ್ತಿರುವ ಸಿಂಹಗಳನ್ನು ಚಿತ್ರಿಸಿದ್ದಾರೆ. ಅವುಗಳ ನಡುವೆ ಒಂದೇ ಆನೆಯನ್ನು ನೆಲಕ್ಕುರುಳಿಸಲು ಮೂರು ಸಿಂಹಗಳು ಅದರ ಮೇಲೆ ಹಲ್ಲೆ ನಡೆಸಿರುವ ಚಿಕ್ಕ ಭಿತ್ತಿಶಿಲ್ಪ ಹೆಚ್ಚು ಕಡೆ ಕಾಣಸಿಗದ ಅಪರೂಪದ ಚಿತ್ರಣೆ.

ಡಂಬಳದ ಸೋಮೇಶ್ವರ ದೇವಾಲಯ





ಆನೆಯ ಮೇಲೆ ದಾಳಿ ನಡೆಸಿರುವ ಮೂರು ಸಿಂಹಗಳು